ಮಾಡದಿದ್ದಲ್ಲಿ ಯಾವಾಗ ಮಾಡಲಾಗುವುದು?

ಉತ್ತರ

1. 75 ಕೋಟಿ ಯೋಜನೆಯ ಅನುದಾನದಲ್ಲಿ ರಾಯಚೂರು ಲೋಕೋಪಯೋಗಿ ವಿಭಾಗಕ್ಕೆ ಮಂಜೂರು ಮಾಡಿ ಟೆಂಡರ್ ಮೂಲಕ ಗುತ್ತಿಗೆ ನೀಡಿದ ಕಾಮಗಾರಿಗಳ ಸಂಖ್ಯೆ 15 (ಹದಿನೈದು)

2.

1)	ರಾಯಚೂರು ಉಪವಿಭಾಗ	3
2)	ಮಾನ್ವಿ ಉಪವಿಭಾಗ	6
3)	ಸಿಂಧನೂರು ಉಪವಿಭಾಗ	2
4)	ಲಿಂಗಸಗೂರು ಉಪವಿಭಾಗ	2
5)	ದೇವದುರ್ಗ ಉಪವಿಭಾಗ	2
	ಒಟ್ಟು	15

3. ಇಲ್ಲಿಯವರೆಗೆ ಒಟ್ಟು 12(ಹನ್ನೆರಡು) ಕಾಮಗಾರಿಗಳು ಮುಕ್ತಾಯಗೊಂಡಿವೆ. ಮುಕ್ತಾಯಗೊಂಡ ಕಾಮಗಾರಿಗಳಲ್ಲಿ 5(ಐದು) ಕಾಮಗಾರಿಗಳಿಗೆ ಹಣ ಪಾವತಿ ಮಾಡಲಾಗಿದೆ, ಉಳಿದ 7 (ಏಳು) ಕಾಮಗಾರಿಗಳಿಗೆ ಹಣ ಭರಮಸೆ ಪತ್ರ (ಎಲ್.ಓ.ಸಿ.) ಬಿಡುಗಡೆ ಆದ ನಂತರ ಪಾವತಿ ಮಾಡಲಾಗುವುದು.

ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಭೂಸ್ವಾಧೀನಪಡಿಸಿಕೊಂಡ ರೈತರಿಗೆ ಪರಿಹಾರ ಧನವನ್ನು ಹೆಚ್ಚಿಸುವ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 662(753)

ಸದಸ್ಯರ ಹೆಸರು : ಶ್ರೀ ಅಮರೇಗೌಡ ಪಾಟೀಲ ಬಯ್ಯಾಪುರ (ಲಿಂಗಸಗೂರು)

ಉತ್ತರಿಸುವ ಸಚಿವರು : ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು)

ಪ್ರಶ್ನೆ

1. ಗುಲ್ಬರ್ಗಾ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ

ಮುಳುಗಡೆಯಾದ ಹಾಗೂ ಸದರಿ ಯೋಜನೆಗೆ ಭೂಸ್ವಾಧೀನಪಡಿಸಿಕೊಂಡು ರೈತರ ಜಮೀನಿಗೆ ಪರಿಹಾರ ಧನವನ್ನು(ಎಕರೆವಾರು) ಹೆಚ್ಚಿಸಲು ಸರ್ಕಾರವು ಕ್ರಮವನ್ನು ತೆಗೆದುಕೊಂಡಿದೆಯೆ?

2. ಸದರಿ ಪ್ರಸ್ತಾವನೆಯನ್ನು ಸದ್ಯ ಯಾವ ಹಂತದಲ್ಲಿದೆ?

3. ಈ ಪ್ರಸ್ತಾವನೆಯನ್ನು ಜಾರಿಗೊಳಿಸುವಲ್ಲಿ ವಿಳಂಬವಾಗಲು ಕಾರಣಗಳೇನು?

ಉತ್ತರ

1. ಕ್ರಮ ತೆಗೆದುಕೊಳ್ಳಲಾಗುತ್ತಿದೆ.

2. ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.

3. ನಿಯಮಾನುಸಾರ ಕ್ರಮ ಜರುಗಿಸುತ್ತಿರುವ ಕಾರಣ ವಿಳಂಬವಿರುವುದಿಲ್ಲ.

ರಾಯಚೂರು ಜಿಲ್ಲೆಯಲ್ಲಿ ರಸ್ತೆಗಳ ಸುಧಾರಣೆಯ ಅನುದಾನದ ಹಂಚಿಕೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 663(976)

ಸದಸ್ಯರ ಹೆಸರು : ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ(ಲಿಂಗಸಗೂರು)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

1. ರಾಯಚೂರು ಜಿಲ್ಲೆಯ ವಿಭಜನೆಯ ನಂತರ, ಜಿಲ್ಲೆಯ ವ್ಯಾಪ್ತಿಯಲ್ಲಿನ ರಸ್ತೆಗಳು ತಾಲ್ಲೂಕುವಾರು ವಿಭಜನೆಯಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ, ಆಯಾ ತಾಲ್ಲೂಕು ರಸ್ತೆಗಳು ವಿಭಜನೆಯಾಗಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಿಗೆ ವಿಭಜನೆಯ ಅನುಗುಣವಾಗಿ ಹಣ ಎಷ್ಟು ವಿಂಗಡಿಸಲಾಗಿದೆ?

ಉತ್ತರ

1. ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ, ರಾಜ್ಯ